
ಮಲ್ಲಿಕಾರ್ಜುನ, ಸುರಧೇನುಪುರ
ಆನೆ ನಡೆದದ್ದೇ ದಾರಿ. ಊನೆ (ಬೆಕ್ಕು) ನಡೆದದ್ದೇ...?




ಮೂಢನಂಬಿಕೆಯವರಿಗಂತೂ ಊನವಾದ ದಾರಿ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ಜೀವನದ ಮಹಾಭಾರತದಲ್ಲಿ ಶಕುನಿಗಳೇ ಸಿಗುತ್ತಾರೆ. ಧರ್ಮರಾಜರು ಯಾಕಿಲ್ಲ?
ಲಾಸ್‌ವೇಗಸ್‌ನಲ್ಲಿ ಪಗಡೆಮೋಹದ ಧರ್ಮರಾಯರ ಪಡೆಗಳೇ ಇವೆ.

ಪಿ. ಜಯವಂತ ಪೈ, ಕುಂದಾಪುರ
ಸರಸಕ್ಕೂ, ವಿರಸಕ್ಕೂ ವ್ಯತ್ಯಾಸವೇನು?
ಸರಸ ಬದುಕಿನ ಹೆದ್ದಾರಿ; ವಿರಸ ರೋಡ್ ಬ್ಲಾಕ್.

ಕೆ.ಎಂ. ಕೊಟ್ರಸ್ವಾಮಿ, ಸಂಡೂರು
ಪ್ರಕೃತಿಮಾತೆಯ ಹಸಿರು ಹೊದಿಕೆಯ ಗುಟ್ಟೇನು?



ಅದು ಬದುಕಿಗೆ 'ಮುನ್ನಡೆ' ಎಂದು ಸೂಚಿಸುವ ಸಿಗ್ನಲ್.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಬ್ರೆಡ್ ಜಾಮಿಗೂ, ಟ್ರಾಫಿಕ್ ಜಾಮಿಗೂ ಇರುವ ವ್ಯತ್ಯಾಸ?
ಇದರಿಂದ ಬ್ರೇಕ್‌ಫಾಸ್ಟ್. ಅದರಿಂದ ಫಾಸ್ಟ್ ಇಲ್ಲ, ಬರೀ ಬ್ರೇಕ್.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
ಚಕಾರ ಎತ್ತಲಿಲ್ಲ ಅಂತಾರೆ. ಚಕಾರವೆ ಯಾಕೆ? ಬೇರಾವ ಅಕ್ಷರ ಯಾಕಿಲ್ಲ?
'ಸಂಚಕಾರ' ಎತ್ತಲಿಲ್ಲ (ಹೂಡಲಿಲ್ಲ) ಎಂಬುದರ ಹ್ರಸ್ವ ರೂಪವಂತೆ.

ಶ್ರೀನಿವಾಸ ಕೆ., ಬೆಂಗಳೂರು
ನಾನು ಬಡತನ ನಿವಾರಿಸಿಕೊಳ್ಳಲು ರಾಜಕೀಯ ಸೇರಲೆ?
ಊಹೂಂ. ಹೈಕ್ಲಾಸಾಗಿ ಬುರುಡೆ ಬಿಡುವ ಜ್ಯೋತಿಷಿಯಾಗಿ.

ಹೆಚ್.ವಿ. ಶ್ರೀಧರ್, ಬೆಂಗಳೂರು
ಉತ್ತರ ಭಾರತೀಯರ ಕನ್ನಡ ವಿರೋಧಿತನದ ದುರಹಂಕಾರವನ್ನು ತಡೆಯುವುದು ಹೇಗೆ?
ನಮ್ಮ ಪರಭಾಷಾಮೋಹ ತೊರೆದು, ಅವರಿಗೆ ಕನ್ನಡಿಗರ ಅನಿವಾರ್ಯತೆ ಮೆರೆದು.

ಭಾರತೀ ಗಂಗಾಧರ್, ಬೆಂಗಳೂರು
ಮರೆಯಲಾಗದ, ಮರೆಯಬಹುದಾದ ಸಂಗತಿಗಳನ್ನು ನಿಭಾಯಿಸುವ ಕಲೆ ಹೇಗೆ?
ಒಳ್ಳೆಯವನ್ನು ಗೆಳೆಯರೊಡನೆ, ಕೆಟ್ಟವನ್ನು ಶತ್ರುಗಳೊಡನೆ ಹಂಚಿಕೊಳ್ಳಿ. ಅವರು ಮರೆಯರು.

ಎನ್. ಗೋಪಾಲರಾವ್, ಬೆಂಗಳೂರು
ಕಾವ್ಯಕನ್ನಿಕೆಯನ್ನು ಯಾರು, ಯಾವಾಗ ಮದುವೆ ಆಗುತ್ತಾರೆ?
ಕನಸುಗಣ್ಣಿನ ಪದಜೋಡಣಮತಿಗಳು; ಅವಳು ಒಲಿದಾಗ.

ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ
ಶ್ರೀರಾಮನ ಸೇತುಬಂಧಕ್ಕೂ, ಈ ರಾಮ್‌ನ ಉತ್ತರಬಂಧಕ್ಕೂ ಸಂಬಂಧವಿದೆಯೆ?
ಎರಡೂ ಸೇತುವೆಗಳೇ; ಅದು ಸಮರಕ್ಕೆ ನಿರ್ಮಿಸಿದ್ದು, ಇದು ಸರಸಕ್ಕೆ ನಿರ್ಮಿಸಿದ್ದು.

ವಾಸಣ್ಣ, ಧಾರವಾಡ
ಮತ್ತು, ಮಾತು, ಮುತ್ತು; ಈ ಮೂರರಲ್ಲಿ ಯಾವುದು ಹೆಚ್ಚು ಪವರ್‌ಫುಲ್?
ಮತ್ತೇರಿಸಬಲ್ಲ, ಮುತ್ತನ್ನು ಆಕರ್ಷಿಸಬಲ್ಲ ಮಾತು!

ರಮೇಶ ಜವಳಗಿ, ಬನಹಟ್ಟಿ
ಚಾ ದೂಕಾನದವರು ಬೆಳಗ್ಗೆ ಒಂದು ಕಪ್ ಚಾ ಮತ್ತು ನೀರನ್ನು ರಸ್ತೆಗೆ ಚೆಲ್ಲುವಂತೆ ಸಾರಾಯಿ ಅಂಗಡಿಯವರೇಕೆ ಚೆಲ್ಲರು?
'ನಮ್ಮ ಬಾಯಿಗೇ ಚೆಲ್ಲಿ' ಎನ್ನುವವರು ಕ್ಯೂ ನಿಲ್ಲುವುದರಿಂದ.


## ಬಹುಮಾನಿತ ಪ್ರಶ್ನೆ

ಬೂಕನಕೆರೆ ವಿಜೇಂದ್ರ, ಮೈಸೂರು
ಕುಡುಕರಿಗೆ ಸಾಲ ಸಿಗುವಂತೆ ಪ್ರಾಮಾಣಿಕರಿಗೆ ಸಾಲ ಸಿಗುವುದಿಲ್ಲವಲ್ಲ?
ಪ್ರಾಮಾಣಿಕರಿಗೆ ಸಾಲ ಪಡೆಯಲು ಅವಶ್ಯವಾದ ಕಥೆ ಕಟ್ಟಲು ಬರುವುದಿಲ್ಲ.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಟೈಮ್ ಇದೆ, ಆದರೆ ಪುರುಸೊತ್ತಿಲ್ಲ ಎಂದರೆ ಏನರ್ಥ?
ಯಾವುದೋ ಚಟಕ್ಕೆ ದಾಸರಾಗಿದ್ದಾರೆ ಎಂದು.

ಐಶ್ವರ್ಯ ಬಿದರಹಳ್ಳಿ, ಹಿರೇಹಡಗಲಿ
Mಗೂ Wಗೂ ಇರುವ ವ್ಯತ್ಯಾಸವೇನು?
M ಬಾಂಡ್ ಫಿಲ್ಮ್‌ನಲ್ಲಿ ಬಾಸ್. W (wife) ಯೂನಿವರ್ಸಲ್ ಬಾಸ್.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಜಾತ್ರೆ, ರಥೋತ್ಸವಗಳು ಬೇಸಿಗೆಯಲ್ಲೇ ಹೆಚ್ಚಾಗಿ ಬರಲು ಕಾರಣವೇನು?



ಮನೆಯಲ್ಲಿ ಸೆಕೆ ತಡೆಯಲಾಗದೆ ಹೆಚ್ಚು ಜನರು ಹೊರಬರುವರೆಂದು.

ಶೃತಿ ರಿಗ್ರೆಟ್ ಐಯ್ಯರ್, ಅಮೆರಿಕಾ
ಅಂದಿನವರಿಗೆ ಕಾಗುಣಿತ ಬಾಯಲ್ಲೇ ಬರುತ್ತಿತ್ತು. ಇಂದಿನ ಯುವಕರಿಗೆ?
ಬೆರಳ ತುದಿಯಲ್ಲೇ ಇರುತ್ತದೆ — ಮೊಬೈಲ್ ಫೋನ್!

ಅನಸೂಯಾ ಟಿ, ಕೇದಿಗೆಮನೆ
ರಾಜಕಾರಣಿಗಳಿಗೆ ಜ್ಞಾನೋದಯವಾಗಲು ಯಾವ ಮರದ ಕೆಳಗೆ ಕೂರಿಸಬೇಕು?
'ನಾವು ತಿಂದು ತೇಗಬಹುದಾದ ತೇಗದ ಮರದ ಕೆಳಗೆ' ಎಂದನಂತೆ ಅರಣ್ಯಮಂತ್ರಿ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಗುರುಗಳೆ, ನಮ್ಮ ಜೀವನದಲ್ಲಿ ನಿಜವಾದ ಯೋಗ ಯಾವುದು?
ನಮ್ಮನ್ನು ಉತ್ತಮಗೊಳಿಸಿಕೊಳ್ಳಲು ಮಾಡುವ ಪ್ರಯೋಗ.

■ ರಾಮ್